3. ಔರಾದ್–ಸದಾಶಿವನಗರ ರಸ್ತೆ	–	20.00 ಕಿ.ಮೀ.
ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ		
1. ಔರಾದ್ ಮುರ್ಕಿ ಗಡಿ ರಸ್ತೆ	–	5.20 ಕಿ.ಮೀ.
ಇ) 5054 ಲೆಕ್ಕ ಶೀರ್ಷಿಕೆಯಡಿ		
1. ವಡಗಾಂವ್ ಕಂದಗೊಳ ರಸ್ತೆ	–	10.03 ಕಿ.ಮೀ.
2. ಸಂತಪೂರ ನಾರಾಯಣಖೇಡ ರಸ್ತೆ	–	2.00 ಕಿ.ಮೀ.
3. ಸಂಗಮ ಕುಶನೂರ ಸಂತಪೂರ ರಸ್ತೆ	–	3.00 ಕಿ.ಮೀ.
4. ಕುಶನೂರ ಬಾವಲಗಾಂವ ರಸ್ತೆ	–	1.00 ಕಿ.ಮೀ.
5. ಮುರ್ಕಿ ಕರಂಜಿ ಗಡಿ ರಸ್ತೆ	–	3.00 ಕಿ.ಮೀ.
ಈ) ನಬಾರ್ಡ್ ಯೋಜನೆ (2005–06)		
1. ವಲ್ಲಾಪುರ ಸಲಾರಹಳ್ಳಿ ಕ್ರಾಸ್ ರಸ್ತೆ ಅಭಿವೃದ್ಧಿ	–	3.30 ಕಿ.ಮೀ.

ಈ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ನಿರ್ವಹಿಸಲಾಗುತ್ತಿರುವ 3 ವರ್ಷಗಳ 3 ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ರೂ.2.00 ಕೋಟಿಗಳಾಗುತ್ತವೆ ಹಾಗೂ ನಬಾರ್ಡ್ ಯೋಜನೆಯಡಿ ಕೈಗೊಳ್ಳುವ ವಲ್ಲಾಪುರ ಸಲಾರಹಳ್ಳಿ ಕ್ರಾಸ್ ರಸ್ತೆ ಅಭಿವೃದ್ಧಿಗೆ ರೂ.30.00 ಲಕ್ಷಗಳಾಗುತ್ತದೆ. ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ.

ಉ) ಮೇಲಿನ ಆ ಮತ್ತು ಇ ಉತ್ತರಗಳಲ್ಲಿರುವಂತೆ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಊ) ನಬಾರ್ಡ್–II ರ ಅಡಿಯಲ್ಲಿ (1) ಸಾವರಗಾಂವ ಹಂಗರಗಾ ಗಡಿ ರಸ್ತೆ ಮತ್ತು (2) ಬಾವಲಗಾಂವ ಹಳ್ಳಿ ಸಮೀಪ ಸೇತುವೆ ನಿರ್ಮಾಣದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ನಬಾರ್ಡ್ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

10, (103) ಶ್ರೀ ಹಾಲಪ್ಪ ಹೆಚ್. : ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಯುವಜನ ಮೇಳಗಳಿಗೆ ಸರ್ಕಾರದಿಂದ ನೀಡುವ ಅನುದಾನವೆಷ್ಟು; (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಸರ್ಕಾರದಿಂದ ನೀಡುವ ಅನುದಾನದಿಂದಲೇ ಯುವಜನ ಮೇಳಗಳನ್ನು ನಡೆಸಲಾಗುತ್ತಿದೆಯೇ; ?

ಇ) ಅನುದಾನವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆಯೇ; ?

ಈ) ಹಾಗಿದ್ದಲ್ಲಿ, ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು ? ಸಂಖ್ಯೆ ವಾಪ್ರಯು 8 ಯುಸೇಭಾ 2006

ಶ್ರೀ ಹನುಮಂತಪ್ಪ ವೈ ಹಾಲ್ಕೋಡ್, ಯುವಜನಸೇವಾ ಹಾಗೂ ಕ್ರೀಡಾ ಸಚಿವರು

ಅ) 2005–06 ನೇ ಸಾಲಿನಲ್ಲಿ ಯುವಜನ ಮೇಳಗಳನ್ನು ನಡೆಸಲು ರಾಜ್ಯ ವಲಯ ಯೋಜನೆಯಡಿ ರೂ. 5.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಹಣದಲ್ಲಿ ವಿಭಾಗ ಮತ್ತು ರಾಜ್ಯಮಟ್ಟದ ಯುವಜನ ಮೇಳಗಳನ್ನು ನಡೆಸಲಾಗುತ್ತದೆ. ಜಿಲ್ಲಾ ಪಂಚಾಯತ್ ಯೋಜನೆಯಡಿ ಕ್ರೀಡಾಕೂಡ ಹಾಗೂ ರ್ಯಾಲಿಗಳ ಸಂಘಟನೆಗಾಗಿ ಒಟ್ಟಾರೆ ರೂ.141.63 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಹಣದಲ್ಲಿ ಕ್ರೀಡಾಕೂಟಗಳನ್ನು ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಯುವಜನ ಮೇಳಗಳನ್ನು ಸಂಘಟಿಸಲಾಗುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಹೌದು.

ಇ) ಪ್ರಯತ್ನಿಸಲಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

ಕ್ರ. ಸಂ.	ಜಿಲ್ಲೆ	ಮೊತ್ತ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರ	9.25
2	ಬೆಂಗಳೂರು ಗ್ರಾಮಾಂತರ	6.00
3	ಚಿತ್ರದುರ್ಗ	3.69
4	ಕೋಲಾರ	8.91
5	ಶಿವಮೊಗ್ಗ	3.13
6	ತುಮಕೂರು	6.26
7	ದಾವಣಗೆರೆ	3.00
8	ಮೈಸೂರು	4.00
9	ಚಿಕ್ಕಮಗಳೂರು	5.00
10	ದಕ್ಷಿಣ ಕನ್ನಡ	6.77
11	ಹಾಸನ	3.83
12	ಕೊಡಗು	5.00
13	ಮಂಡ್ಯ	7.91
14	ಚಾಮರಾಜನಗರ	4.00

15	ಉಡುಪಿ	6.00
16	ಬೆಳಗಾಂ	8.94
17	ಬಿಜಾಪುರ	4.20
18	ಧಾರವಾಡ	5.85
19	ಉತ್ತರ ಕನ್ನಡ	8.17
20	ಬಾಗಲಕೋಟೆ	6.20
21	ಗದಗ	2.39
22	ಹಾವೇರಿ	0.98
23	ಗುಲ್ಬರ್ಗಾ	5.70
24	ಬಳ್ಳಾರಿ	5.00
25	ಬೀದರ್	5.50
26	ರಾಯಚೂರು	2.55
27	ಕೊಪ್ಪಳ	3.40
	ಒಟ್ಟು	**141.63**

11, (104) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2002 ರಿಂದ 2005 ರವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಮಂಜೂರಾದ ನಬಾರ್ಡ್ ರಸ್ತೆ ಕಾಮಗಾರಿಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ಖರ್ಚು ಮಾಡಿರುವ ಹಣವೆಷ್ಟು ಹಾಗೂ ಕೈಗೊಂಡಿರುವ ರಸ್ತೆ ಉದ್ದವೆಷ್ಟು ?

ಆ) ಈ ಯೋಜನೆ ಅಡಿಯಲ್ಲಿ ಹೊಸನಗರ ಕ್ಷೇತ್ರಕ್ಕೆ ಎಷ್ಟು ಕಿ.ಮೀ. ಉದ್ದ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು)

ಇ) ಇಲ್ಲಿಯವರೆವಿಗೆ ಪೂರ್ಣಗೊಂಡಿರುವ ಹಾಗೂ ಅಪೂರ್ಣ ಗೊಂಡಿರುವ ರಸ್ತೆಗಳೆಷ್ಟು? (ವಿವರ ಒದಗಿಸುವುದು)

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) 2002–03ನೇ ಸಾಲಿನಿಂದ 2004–05ನೇ ಸಾಲಿನವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಆರ್.ಐ.ಡಿ.ಎಫ್–8,9, ಮತ್ತು 10ರಡಿ 1513.00 ಲಕ್ಷ ರೂ. ಮೊತ್ತದಲ್ಲಿ 149.15 ಕಿ.ಮೀ. ಉದ್ದದ 26 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತವೆ. ಈ ಕಾಮಗಾರಿಗಳಿಗೆ ಫೆಬ್ರವರಿ 2006ರ ಅಂತ್ಯದವರೆಗೆ 640.00 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.